**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ 9 ಇಎಸ್‌ಟಿ2(ಎ)2014

ನಿರ್ದೇಶಕರ ಕಛೇರಿ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 04.08.2014.

**ಸುತ್ತೋಲೆ**

ವಿಷಯ: 2014ರ ವರ್ಗಾವಣೆಗಳನ್ನು ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 75 ಶಾಸನ 2012,ದಿ:6-2-2013
2) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 74 ಡಿಟಿಇ 2013, ದಿ:5-3-2014
3) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 74 ಡಿಟಿಇ 2013, ದಿ:3-7-2014
4) ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ ಡಿಟಿಇ 09 ಇಎಸ್‌ಟಿ 2(ಎ) 2014 ದಿ:02/08/2014

-----

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಗಳ ವರ್ಗಾವಣೆ ನಿಯಂತ್ರಣ) ಅಧಿನಿಯಮ -2012 ಮತ್ತು ನಿಯಮಗಳು -2013 ಅನ್ನು ಜಾರಿಗೆ ತರಲಾಗಿದ್ದು ಸದರಿ ಅಧಿನಿಯಮದನ್ವಯ ಇಲಾಖೆಯ ಸಿಬ್ಬಂದಿಗಳ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ನಡೆಸಲು ಉಲ್ಲೇಖ (4) ರಲ್ಲಿನ ಸುತ್ತೋಲೆಯಲ್ಲಿ ಮಾರ್ಗಸೂಚಿ ಹೊರಡಿಸಲಾಗಿರುತ್ತದೆ.

ಕೆಲವು ಸಂಸ್ಥೆಗಳ ಪ್ರಾಂಶುಪಾಲರು ಕನಿಷ್ಠ ಅವಧಿಯ ಬಗ್ಗೆ ಸ್ಪಷ್ಟಿಕರಣ ಕೋರಿದ್ದು ಇದಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಿಸುವುದೇನೆಂದರೆ ಯಾವುದೇ ಸಿಬ್ಬಂದಿಯು ಅಧಿನಿಯಮ 2013 ಪ್ರಕರಣ (3) ರಲ್ಲಿ ನೀಡಿರುವ ವಿವರಣೆಯಂತೆ ಹಾಗೂ ನಿಯಮ 2013 ರ ಕಂಡಿಕೆ (4) ರಂತೆ ಯಾವುದೇ ಸಿಬ್ಬಂದಿಯು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ದಿ: 07/07/2014 ರಂದು ಕೇಳಕಂಡಂತೆ ಆಯಾ ಆಯಾ ಗ್ರೂಪ್ ಹುದ್ದೆಗೆ ನಿಗಧಿಪಡಿಸಲಾಗಿರುವ ಕನಿಷ್ಠ ಸೇವಾವಧಿಯ ವರ್ಷ ಮೀರದೆ ಇದ್ದಲ್ಲಿ ಆ ಸಿಬ್ಬಂದಿಯವರು ವರ್ಗಾವಣೆ ಕೌನ್ಸಿಲಿಂಗ್‌ಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ. ಉದಾ: ಉಪನ್ಯಾಸಕರೊಬ್ಬರು ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹಾಸನ ಇಲ್ಲಿ ಎರಡು ವರ್ಷ ಮತ್ತು ಸರ್ಕಾರಿ ಎಲ್.ವಿ. ಪಾಲಿಟೆಕ್ನಿಕ್, ಹಾಸನ ಎರಡು ವರ್ಷ ಒಂದು ತಿಂಗಳು ಕಾರ್ಯ ನಿರ್ವಹಿಸಿದ್ದಲ್ಲಿ ಒಟ್ಟಾರೆ 4 ವರ್ಷ 1 ತಿಂಗಳು ಒಂದೇ ಸ್ಥಳ ಹಾಸನದಲ್ಲಿ ಕಾರ್ಯ ನಿರ್ವಹಿಸಿರುವುದರಿಂದ ನಿಯಮಾನುಸಾರ 4 ವರ್ಷ ಪೂರ್ಣಗೊಂಡಿರುವುದರಿಂದ ವರ್ಗಾವಣೆ ಕೌನ್ಸಿಲಿಂಗ್‌ಗೆ ಕಡ್ಡಾಯವಾಗಿ ಹಾಜರಾಗಬೇಕಾಗಿರುತ್ತದೆ. ಒಂದು ಸ್ಥಳದಲ್ಲಿ 4 ವರ್ಷ ಮೀರದ ಪಕ್ಷದಲ್ಲಿ ಕೌನ್ಸಿಲಿಂಗ್‌ಗೆ ಬರಬೇಕಾದ ಅವಶ್ಯಕತೆ ಇರುವುದಿಲ್ಲ. ಆದರೆ ವಿಶೇಷ ಪ್ರಕರಣಗಳಲ್ಲಿ ಅವಧಿ ಪೂರ್ಣಗೊಳ್ಳದಿದ್ದರೂ ವರ್ಗಾವಣೆಗೆ ಕೋರಿಕೆ ಸಲ್ಲಿಸಿರುವ ಮತ್ತು ಅವಧಿ ಮೀರಿರುವ ಸಿಬ್ಬಂದಿ ಹಾಜರಾಗಬೇಕಾಗಿರುತ್ತದೆ. ನಮೂನೆ – 3 ರಲ್ಲಿ ಕಾಣಿಸಿರುವ ಹುದ್ದೆಗೆ ಎದುರಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರ ಕನಿಷ್ಟ ಸೇವಾವಧಿ ಮಿತಿಯಿರುವುದ್ದಿಲ್ಲ. ಒಂದು ದಿನ ಕಾರ್ಯ ನಿರ್ವಹಿಸಿದ್ದರೂ ಸಹ ಕೌನ್ಸಿಲಿಂಗ್‌ಗೆ ಕಡ್ಡಾಯವಾಗಿ ಹಾಜರಾಗಿ ಸ್ಥಳ ಆಯ್ಕೆ ಮಾಡಬೇಕಾಗಿರುತ್ತದೆ. ಸಿ ಮತ್ತು ಡಿ ಗ್ರೂಪ್ ನೌಕರರು (ಕಛೇರಿ ಸೇವಕ, ಕಛೇರಿ ಸಹಾಯಕ, ಹೆಲ್ಪರ್, ಕುಕ್ ಮುಂತಾದ ಸಿಬ್ಬಂದಿ) ನಮೂನೆ 4 ಮತ್ತು 5 ರಲ್ಲಿ ನಮೂದಿಸಿರುವವರು ಮಾತ್ರ ವರ್ಗಾವಣೆ ಕೌನ್ಸಿಲಿಂಗ್‌ಗೆ

ಹಾಜರಾಗಬೇಕಾಗಿರುತ್ತದೆ. ಆದುದರಿಂದ ಪ್ರಾಂಶುಪಾಲರು ಮೇಲೆ ತಿಳಿಸಿರುವ ಸೂಚನೆಯನುಸಾರ ಸೂಕ್ತ ಕ್ರಮಕೈಗೊಳ್ಳಬೇಕೆಂದು ಸೂಚಿಸಲಾಗಿದೆ.

**ಕೋಷ್ಟಕ**

| ಕ್ರಮ ಸಂಖ್ಯೆ | ಹುದ್ದೆ ಪ್ರವರ್ಗ | ಒಂದು ವಲಯದಲ್ಲಿ ನಿಗದಿಪಡಿಸಲಾದ ಕನಿಷ್ಠ ಸೇವಾವಧಿ ವರ್ಷಗಳಲ್ಲಿ |
|---|---|---|
| 1. | ಗ್ರೂಪ್ 'ಬಿ' ಹುದ್ದೆಗಳು | 4 ವರ್ಷ |
| 2. | ಗ್ರೂಪ್ 'ಸಿ' ಹುದ್ದೆಗಳು | 5 ವರ್ಷ |
| 3. | ಗ್ರೂಪ್ 'ಡಿ' ಹುದ್ದೆಗಳು | 7 ವರ್ಷ |

ನಿರ್ದೇಶಕರು

ಇವರಿಗೆ:

1. ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜು / ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ / ಸ್ಟೆರಿಕ್ ಪ್ರಾಂಶುಪಾಲರು. ಈ ಸುತ್ತೋಲೆಯಲ್ಲಿ ಹೊರಡಿಸಲಾಗಿರುವ ಸೂಚನೆ ಮತ್ತು ಮಾರ್ಗಸೂಚಿಯನ್ನು ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು
2. ಇ-ಆಡಳಿತ.
3. ನಿರ್ದೇಶಕರ ಆಪ್ತಶಾಖೆ
4. ಕಛೇರಿ ಪ್ರತಿ.